ಓ.ಎಸ್. ನಂ. 169 /2018
ಪಿ ಡಬ್ಲ್ಯೂ -1

**ಸಾಕ್ಷಿಯನ್ನು ದಿನಾಂಕ: 09-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಶ್ರೀ ಪಿ.ಡಿ.ಟಿ. ವಕೀಲರಿಂದ**

**1.** ನಾನು ದ್ವಿತಿಯ ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಈಗ ನನ್ನ ತಂದೆ ವ್ಯವಸಾಯ ಮಾಡಲಾಗುವುದಿಲ್ಲ, ನಾವು ಮಡುತ್ತಿರುತ್ತೇವೆ. ನನ್ನ ತಂದೆಗೆ 8-10 ತಿಂಗಳಿಂದ ಇಚೆಗೆ ಬುದ್ದಿ ಜ್ಞಾನ ಸರಿ ಇರುವುದಿಲ್ಲ. ವಿ.ಡಿ. ಸಿದ್ದರಾಮಯ್ಯ ಮತ್ತು ವೀರಕ್ಯಾತರಾಯ ರವರ ಕುಟುಂಬದವರ ಬಗ್ಗೆ ನನಗೆ ಗೊತ್ತಿರುವುದಿಲ್ಲ, ವಿ.ಡಿ. ಸಿದ್ದರಾಮಯ್ಯನವರ ಕುಟುಂಬದವರ ಬಗ್ಗೆ ಮಾತ್ರ ನನಗೆ ಗೊತ್ತು. ವಿ.ಡಿ. ವೀರಕ್ಯಾತಯ್ಯನವರು ಈಗ ಜೀವಂತ ಇರುತ್ತಾರೆ. ನನ್ನ ತಂದೆ ವಿ.ಡಿ. ವೀರಕ್ಯಾತಯ್ಯನವರಿಂದ ಜಮೀನನ್ನು ಖರೀದಿ ಮಾಡಿರುತ್ತಾರೆ. ವಿ.ಡಿ. ವೀರಕ್ಯಾತಯ್ಯನವರ ಸಹೋದರರು ಪ್ರತಿವಾದಿಗಳ ಪರ ಇರುವ ಕಾರಣ, ವಿ.ಡಿ. ವೀರಕ್ಯಾತಯ್ಯನವರನ್ನು ನಾನು ಸಾಕ್ಷಿ ಮಾಡಿಸಲಾಗುವುದಿಲ್ಲ.

ದಾವಾ ಆಸ್ತಿಯು 1974 ರಲ್ಲಿ ಏಕಮುಖ ವಿಭಾಗ ಪತ್ರದ ಮೂಲಕ ವಿ.ಡಿ. ವೀರಕ್ಯಾತಯ್ಯನವರಿಗೆ ಬಂದಿರುತ್ತದೆ. ನಾನು ಏಕಮುಖ ವಿಭಾಗ ಪತ್ರವನ್ನು ಓದಿ ತಿಳಿದುಕೊಂಡಿರುವುದಿಲ್ಲ. ಏಕಮುಖ ವಿಭಾಗ ಮೂಲ ಪತ್ರ ನನ್ನ ಬಳಿ ಇದ್ದು, ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿಪಿ-2 ದೃಡೀಕೃತ ನಕಲು ಎಂದರೆ ಸರಿ. ಏಕಮುಖ ವಿಭಾಗ ಪತ್ರವಾಗುವ ಕಾಲಕ್ಕೆ ಸ.ನ. 39 ಪೋಡಾಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಸ.ನ. 39 ಒಟ್ಟು ವಿಸ್ತೀರ್ಣ 6 ಎಕರೆ 12 ಗುಂಟೆ ಇದ್ದು, ಆ ಪೈಕಿ ಖರಾಬು 10-11 ಗುಂಟೆ ಇರುತ್ತದೆ. ನಿಪಿ-2 ರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸ.ನ. 39/1 ರ ಕಂಪ್ಯೂಟರ್ ಪಹಣಿ ಪತ್ರಿಕೆಗಳನ್ನು ನಾನು ನೋಡಿರುತ್ತೇನೆ. ಸದರಿ ಸ.ನ. 39/1 ರ ದಕ್ಷಿಣಕ್ಕೆ ಸರ್ಕಾರಿ ರಸ್ತೆ ಇರುತ್ತದೆ ಎಂದರೆ ಸರಿ.

ನಮ್ಮ ಅನುಭವದಲ್ಲಿರುವ ಜಮೀನಿನ ಪೂರ್ವದ ಕಡೆಯಿಂದ ಉತ್ತರದ ಕಡೆಗೆ ಹಿರೆಕಾಲುವೆ ಹೋಗುತ್ತದೆ ಎಂದರೆ ಸರಿ. ನಮ್ಮ ಅನುಭವದ ಜವೀನಿನ ಪೂರ್ವ ಮತ್ತು ಉತ್ತರದ ಕಡೆಗೆ ಹಿರೆ ಕಾಲುವೆ ಬರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ಪಶ್ಚಿಮ ಭಾಗದ ಕಡೆ ಪ್ರತಿವಾದಿಗಳಿಗೆ ಸೇರಿದ ಅನುಭವದ ಜಮೀನು ಬರುತ್ತದೆ ಎಂದರೆ ಸರಿ. ಪ್ರತಿವಾದಿಗಳ ಅನುಭವದ ಜಮೀನಿನಲ್ಲಿ ಒಂದು ಕಲ್ಲು ಮಂಟಪ ಮತ್ತು ಕಣದ ಜಾಗ ಇರುತ್ತದೆ ಎಂದರೆ ಸರಿಯಲ್ಲ, ನಮ್ಮ ಅನುಭವದ ಜಾಗದಲ್ಲಿ ಇರುತ್ತದೆ. ನಿಪಿ-2 ಮತ್ತು 3 ರಲ್ಲಿ ಕಲ್ಲು ಮಂಟಪ ಮತ್ತು ಕಣದ ಜಾಗ ಮಾರಾಟಾಗಿರುವ ಬಗ್ಗೆ

ಕಾಣಿಸಿರುವುದಿಲ್ಲ. ನಮ್ಮ ಜಮೀನಿನ ಉತ್ತರ ಭಾಗದಲ್ಲಿ ಹೋಗುವ ಹಿರೆ ಕಾಲುವೆ ಪ್ರತಿವಾದಿಗಳ ಜಮೀನಿನ ಉತ್ತರ ಭಾಗದಲ್ಲಿ ಹಾದು ಹೋಗುತ್ತದೆ ಎಂದರೆ ಸರಿ. ಸದರಿ ಹಿರೆ ಕಾಲುವೆಯ ಉತ್ತರ ಭಾಗದಲ್ಲಿ ಬಸವರಾಜಯ್ಯನವರಿಗೆ ಸೇರಿದ ಸ್ವಲ್ಪ ಜಮೀನು, ರಾಮಚಂದ್ರಯ್ಯನವರಿಗೆ ಸೇರಿದ ಸ.ನ. 40 ರ ಜಮೀನು, ಅದೇ ರೀತಿ ಲಿಂಗಮ್ಮನವರಿಗೆ ಸೇರಿದ ಸ.ನ. 40 ರ ಜಮೀನು ಇರುತ್ತವೆ ಎಂದರೆ ಸರಿ. ಲಿಂಗಮ್ಮನವರಿಗೆ ಸೇರಿದ ಸ.ನ. 40 ರ ಜಮೀನಿನಲ್ಲಿ ಒಂದು ಪಂಪ್ ರೂಮ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅನುಭಾವದಲ್ಲಿರುವ ಜಮೀನು ಹಾಗೂ ಪ್ರತಿವಾದಿಗಳ ಅನುಭವದಲ್ಲಿರುವ ಸ.ನ. 39/1 ರ ಜಮೀನಿನ ಮಧ್ಯ ಭಾಗದಲ್ಲಿ ಈ ಎರಡು ಜಮೀನುಗಳ ನಡುವೆ ಎರಡು ಜಮೀನಿನ ದಕ್ಷಿಣದಲ್ಲಿರುವ ಸರ್ಕಾರಿ ರಸ್ತೆಯಿಂದ ಪ್ರಾರಂಭವಾಗಿ ಉತ್ತರದ ಕಡೆ ಎರಡು ಜಮೀನುಗಳ ಮಧ್ಯೆದಲ್ಲಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಅನುಭವದ ಜಮೀನು ಹಾಗು ್ಷಪರತಿವಾದಿಗಳ ಅನುಭವದ ಜಮೀನನ್ನು ಸದರಿ ರಸ್ತೆ ಬೇಪರ್ಡಿಸಿರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯನ್ನು 1874 ಕ್ಕಿಂತ ಮೊದಲಿನಿಂದಲೂ ಮಾವಿನ ರಸ್ತೆ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಏಕಮುಖ ವಿಭಾಗ ಪತ್ರದಲ್ಲಿ ಬಂದಂತಹ ಜಮೀನು ಮಾವಿನ ತೋಪಿನ ರಸ್ತೆಯ ಪೂರ್ವ ಭಾಗದಲ್ಲಿ ವೀರಕಾತಯ್ಯನವರಿಗೆ ಬಂದತಹ ಆಸ್ತಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆಗಾಗಿ ವೀರಕಾತಯ್ಯನವರು ಮಾವಿನ ತೋಪಿನ ರಸ್ತೆಯ ಪೂರ್ವ ಭಾಗದ ಜಮೀನನ್ನು ಅನುಭವ ಮಾಡುತ್ತಿದ್ದು , ಮಾವಿನ ತೋಪಿನ ರಸ್ತೆಯ ಪಶ್ಚಿಮ ಭಾಗದಲ್ಲಿರುವ ಜಮೀನನ್ನು ವೀರಕಾತಯ್ಯ ಅನುಭವ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾವಿನ ತೋಪಿನ ರಸ್ತೆಯ ಪೂರ್ವ ಭಾಗದಲ್ಲಿ ವೀರಕಾತಯ್ಯನವರ ಅನುಭವದಲ್ಲಿ ಕೇವಲ 1 ಎಕರೆ 30 ಗುಂಟೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆಗಾಗಿ ವೀರಕಾತಯ್ಯನವರು ಅವರ ಅನುಭವದಲ್ಲಿದ್ದ 1 ಎಕರೆ 30 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾವಿನ ತೋಪಿ ರಸ್ತೆಯ ಪಶ್ಚಿಮ ಭಾದಲ್ಲಿರುವ ಸ.ನ. 39/1 ರ 4 ಎಕರೆ 25 ಗುಂಟೆ ವಿಸ್ತೀರ್ಣದ ಜಮೀನು ಪ್ರತಿವಾದಿಗಳ ಅನುಭವದಲ್ಲಿರುತ್ತದೆ ಎಂದರೆ ಸರಿಯಲ್ಲ, 3 ಎಕರೆ 25 ಗುಂಟೆ ಇರುತ್ತದೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

ಸಹಿ/-

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**